ದೇವಿಯೆದುರು ನಿಂತಳು. ಗಂಟೆಯ ನಿನಾದ ನಿಧಾನಕ್ಕೆ ವೇಗವನ್ನು ಪಡೆದುಕೊಳ್ಳತೊಡಗಿತು. ನಿಧಾನವಾಗಿ ಸಿಂಗಾರವನ್ನು ಹಿಡಿದ ಪೂಜಾರಿಣಿಯ ಕೈ ನಡುಗತೊಡಗಿತು. ಸಣ್ಣಗೆ ಆರಂಭವಾದ ಆ ಚಲನೆ ಇಡಿಯ ದೇಹವನ್ನು ವ್ಯಾಪಿಸಿಕೊಳ್ಳುತ್ತಾ ಕೊನೆಯಲ್ಲಿ ಅವಳು ಕಿರುಚುತ್ತಾ ಪ್ರಾಂಗಣದ ತುಂಬ ಕುಣಿದು ಕುಪ್ಪಳಿಸತೊಡಗಿದಳು. ಅರ್ಚಕರು ದೇವಿಯ ಪ್ರಸಾದವನ್ನು ಅವಳಿಗೆ ನೀಡಿ ತೀರ್ಥವನ್ನು ಅವಳಿಗೆ ಪ್ರೋಕ್ಷಣೆ ಮಾಡುತ್ತಾ ಶಾಂತಳಾಗಬೇಕು ತಾಯೇ ಎಂದು ಪ್ರಾರ್ಥಿಸಿದರು. ಅಲ್ಲಿ ಸೇರಿದ ಭಕ್ತಾದಿಗಳಲ್ಲಿ ಕೆಲವರು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕೇಳಿದರು. ದೇವಿ ಅವರೆಲ್ಲರಿಗೂ ಸೂಚ್ಯವಾಗಿ ಏನೆಲ್ಲವನ್ನು ಹೇಳಿದಳು. ಅರ್ಥವಾಗದ ಕೆಲವರಿಗೆ ತಾನು ಮತ್ತೆ ವಿವರಿಸುವುದಾಗಿ ಅರ್ಚಕರು ಸನ್ನೆ ಮಾಡಿದರು. ದೇವಿ ಇನ್ನೇನು ನಿರ್ಗಮಿಸುವಳೆಂದಾಗ ಸುತ್ತ ಕುಳಿತ ಹೆಂಗಳೆಯರೆಲ್ಲ ನಡುಗತೊಡಗಿದರು. ಕೆಲವರು ಎದ್ದು ಕುಣಿದರೆ ಇನ್ನುಳಿದವರು ನೆಲದಲ್ಲಿಯೇ ಮಲಗಿ ಆವೇಶಗೊಂಡವರಂತೆ ಉರುಳಾಡತೊಡಗಿದರು. ಲೋರೆ ಮೊದಲೇ ತಿಳಿಸಿದಂತೆ ಇವೆಲ್ಲವನ್ನೂ ಚಿತ್ರಿಸಿಕೊಳ್ಳುತ್ತಿದ್ದ. ಇಬ್ಬರು, ಮೂವರು ಹಿಡಿದರೂ ಬಿಡಿಸಿಕೊಂಡು ಹುಚ್ಚೆದ್ದು ಕುಣಿಯುತ್ತಿದ್ದ ಹೆಂಗಸರು ತಮ್ಮ ಮೇಲಿನ ಆವೇಶ ಇಳಿದೊಡನೆ ತೀರ ಬಳಲಿದವರಂತೆ ಮೈಮೇಲಿನ ಪ್ರಜ್ಞೆಯನ್ನು ಕಳೆದುಕೊಂಡು ಪ್ರಾಂಗಣದಲ್ಲಿ ಬಿದ್ದುಕೊಂಡರು. ಇಡಿಯ ಪ್ರಾಂಗಣವೀಗ ಒಂದು ಯುದ್ಧಭೂಮಿಯಂತೆ ಕಾಣುತ್ತಿತ್ತು. ಖಡ್ಗ ಹಿಡಿದು, ನಾಲಿಗೆಯನ್ನು ಹೊರಚಾಚಿ ಗರ್ಭಗುಡಿಯೊಳಗೆ ಕುಳಿತ ದೇವಿಯೀಗ ಇನ್ನಷ್ಟು ಉಗ್ರವಾಗಿ ಕಾಣತೊಡಗಿದಳು.

ಎಲ್ಲ ಮುಗಿದು ತೀರ್ಥಪ್ರಸಾದಗಳ ವಿನಿಮಯವಾದ ಮೇಲೆ ನಾವು ಹೊರಬಂದೆವು. ದರ್ಶನಕ್ಕೆ ಸೇರಿದ ಜನಜಂಗುಳಿ ಮೆಲ್ಲನೆ ಕರಗತೊಡಗಿತು. ಲೋರೆ ತನ್ನ ಚಿತ್ರೀಕರಣದ ಗುಣಮಟ್ಟವನ್ನು ಪರೀಕ್ಷಿಸತೊಡಗಿದ. ಅದನ್ನು ವೀಕ್ಷಿಸುತ್ತಿದ್ದ ನನಗೆ ಇದ್ದಕ್ಕಿದ್ದಂತೆ ಆ ಪೂಜಾರಿಣಿಯ ಮುಖ ತೀರ ಪರಿಚಿತ ಅನಿಸತೊಡಗಿತು. ಎಲ್ಲೋ ಬಹಳ ಹತ್ತಿರದಿಂದ ಅವಳನ್ನು ನೋಡಿದ ನೆನಪಾಯಿತು. ಬಹುಶಃ ನನ್ನ ಹಳ್ಳಿಯಲ್ಲಿಯೇ ನನ್ನ ಬಾಲ್ಯದಲ್ಲಿಯೇ ನೋಡಿದ ಮುಖವೆನಿಸತೊಡಗಿತು. ಅಲ್ಲಿಯವರು ಇಲ್ಲಿ ಇಷ್ಟು ದೂರದ ಮುಂಬೈಗೆ ಬರಲು ಹೇಗೆ ಸಾಧ್ಯ ಎನ್ನುವ ಯೋಚನೆಯೂ ಸುಳಿಯಿತು. ತಕ್ಷಣ ಏನೋ ನೆನಪಾದಂತೆ ಅಮ್ಮನಿಗೆ ಫೋನ್ ಹಚ್ಚಿದೆ. ನನ್ನ ಬಾಲ್ಯದ ಗೆಳತಿ ದೇವಿಯ ಬಗ್ಗೆ ವಿಚಾರಿಸಿದೆ. ಅವಳು ಹತ್ತಿರದ ನಗರದಲ್ಲಿ ಮೀನು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವಾಗಲೇ ಅದ್ಯಾವುದೋ ಹುಡುಗನೊಂದಿಗೆ ಓಡಿಹೋದ ಕತೆಯನ್ನು ಹೇಳಿದಳು. ಅಲ್ಲಿಗೆ ನನ್ನ ಕತೆಗೊಂದು ಸಿನಿಮೀಯ ತಿರುವು ದೊರೆಯಿತು.

ನಾನು ಲೋರೆಗೆ ಒಂದು ಇಡಿಯ ಬಳಪದ ಕತೆಯನ್ನು ಹೇಳತೊಡಗಿದೆ. ಹೌದು, ನಾವು ಚಿಕ್ಕವರಿರುವಾಗ ಒಂದು ಇಡಿಯ ಬಳಪದಲ್ಲಿ ಬರೆಯಬೇಕು ಎಂಬುದು ನಮ್ಮೆಲ್ಲರ ಕನಸಾಗಿತ್ತು. ಆದರೆ ಇಡಿಯ ಬಳಪವನ್ನು ನಮ್ಮ ಕೈಗೆ ಕೊಡುವಷ್ಟು ಧಾರಾಳತನ ಯಾವ ಪೋಷಕರಿಗೂ ಇರಲಿಲ್ಲ. ಬಳಪ ಬೇಕೆಂದು ನಾನು ಕೇಳಿದಾಗಲೆಲ್ಲ ಅಪ್ಪ ತನ್ನ ಪೆಟ್ಟಿಗೆಯಿಂದ ಒಂದು ಇಡಿಯ ಬಳಪವನ್ನು ತೆಗೆದು ಅದನ್ನು ಕಟ್ ಕಟ್ ಎಂದು ಮುರಿದು ಮೂರು ತುಂಡುಗಳನ್ನು ಮಾಡಿ ಒಂದನ್ನು ನನ್ನ ಕೈಗಿಡುತ್ತಿದ್ದ. ಆ ಕಟ್ ಕಟ್... ಎನ್ನುವ ಸದ್ದಿನೊಂದಿಗೆ ನನ್ನ ಕನಸು ಕೂಡ ಮುರಿದುಹೋಗುತ್ತಿತ್ತು. ಆದರೆ ನಾವೆಲ್ಲರೂ ನಮ್ಮ ಮುರಿದ ಬಳಪವನ್ನು ಉದ್ದವಾಗಿಸುವ ಉಪಾಯವೊಂದನ್ನು ಹುಡುಕಿಕೊಂಡಿದ್ದೆವು. ನಮ್ಮ ಅಕ್ಕಂದಿರಿಂದ ಹಾಳಾದ ಪೆನ್ನನ್ನು ತೆಗೆದುಕೊಂಡು ಅದರ ತುದಿಗೆ ಬಳಪದ ಚೂರನ್ನು ಸಿಕ್ಕಿಸಿ ಅದನ್ನು ಉದ್ದವಾಗಿಸುತ್ತಿದ್ದೆವು.

ನಮ್ಮ ಮನೆಯ ಹತ್ತಿರದಲ್ಲೇ ದೇವಿಯ ಮನೆ ಕೂಡ ಇತ್ತು. ಅವಳು ಇಡಿಯ ನಮ್ಮ ಶಾಲೆಯಲ್ಲಿಯೇ ಬಹಳ ಧೈರ್ಯಸ್ಥೆಯೆಂದು ಹೆಸರುವಾಸಿಯಾಗಿದ್ದಳು. ಅವಳ ಕಬಡ್ಡಿಯ ಪಟ್ಟಿಗೆ